ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ

ರಾಣೇಬೆನ್ನೂರು.

ಸಿ.ಸಿ.ಸಂಖ್ಯೆಃ 707/2024

ಪಿ ಡಬ್ಲ್ಯೂಃ 2

ಸಿ ಡಬ್ಲ್ಯೂಃ 4

| | | |
|---|---|---|
| ಸಾಕ್ಷಿಯ ಹೆಸರು | : | ಹನುಮಂತ |
| ತಂದೆಯ ಹೆಸರು | : | ನಾಗಪ್ಪ ರಂಗಣ್ಣವರ |
| ವಯಸ್ಸು | : | 44 |
| ಉದ್ಯೋಗ | : | ಅಬಕಾರಿ ಉಪ ನಿರೀಕ್ಷಕರು, ಹುಬ್ಬಳ್ಳಿ ವಲಯ |
| ವಾಸಸ್ಥಳ | : | ಹುಬ್ಬಳ್ಳಿ |

ದಿನಾಂಕಃ 02-12-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ನಾನು ದಿನಾಂಕ 28-10-2011 ರಿಂದ 12-07-2024 ರ ವರೆಗೆ ಪಿರ್ಯಾದಿ ಠಾಣೆಯಲ್ಲಿ ಅಬಕಾರಿ ಮುಖ್ಯಪೇದೆಯಾಗಿ ಕಾರ್ಯ ನಿರ್ವಹಿಸಿರುತ್ತೇನೆ

2. ದಿನಾಂಕ 13-04-2024 ರಂದು ಲೋಕಸಬಾ ಚುನಾವಣೆ ನಿಮಿತ್ತ ಚಾ ಸಾ 1 ರವರೊಂದಿಗೆ ಮೆಡ್ಲೇರಿ ಗ್ರಾಮದಲ್ಲಿ ಗಸ್ತು ಮಾಡುತ್ತಿರುವಾಗ, ಬೆಳಗ್ಗೆ 10-45 ಗಂಟೆ ಸಮಯದಲ್ಲಿ ಆರೋಪಿಯು ಅಕ್ರಮವಾಗಿ ಮಧ್ಯ ಸಂಗ್ರಹಿಸಿ ಸಾಗಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಸದರಿ ಮಾಹಿತಿಯನ್ನು ಚಾಸಾ 1 ರವರು ನನಗೆ ತಿಳಿಸಿದಂತೆ, ನಾನು ಮತ್ತು ಚಾ ಸಾ 1 ರವರು ಮೆಡ್ಲೇರಿ ಪಶು ಆಸ್ಪತ್ರೆಯ ಬಳಿ ಗಸ್ತು ಮಾಡುತ್ತಿದ್ದಾಗ ಆರೋಪಿಯು ಒಂದು ಚೀಲದಲ್ಲಿ ಹೊತ್ತುಕೊಂಡು ಬರುತ್ತಿದ್ದು, ಅಲ್ಲಿಯೇ ಇದ್ದ ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ನೋಟೀಸ್ ನೀಡಿರುತ್ತೇವೆ. ಆರೋಪಿಯನ್ನು ನಿಲ್ಲಿಸಿ ವಿಚಾರಿಸಿ, ಶೋಧಿಸಲು ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರ ವರದಿಯನ್ನು ತಯಾರಿಸಿ ದಾಳಿಯನ್ನು ಮಾಡಿರುತ್ತೇವೆ.

3. ನಂತರ ಆರೋಪಿಯ ಬಳಿ ಇದ್ದ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ ಮಧ್ಯದ ಟೆಟ್ರಾ ಪ್ಯಾಕೆಟ್ ಗಳು ಇದ್ದು ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾನೆ. ಸದರಿ ಚೀಲದಲ್ಲಿ 90 ಮಿಲಿಯ 96 ಹೆಚ್ ಸಿ ವಿಸ್ಕಿಯ ಟೆಟ್ರಾ ಪ್ಯಾಕೆಟ್‌ಗಳು ಇದ್ದು ಟೆಟ್ರಾ ಪ್ಯಾಕ್ ಗಳ

ಮೇಲಿನ ಭದ್ರತಾ ಚೀಟಿಗಳನ್ನು ಹರಿದು ಹಾಕಲಾಗಿತ್ತು. ಆರೋಪಿಯನ್ನು ವಿಚಾರಿಸಿದಾಗ ಆತನ ಹೆಸರು ಹನುಮಂತಪ್ಪ ಜೀವಪ್ಪ ಕಲಾಲ ಎಂದು ತಿಳಿಸಿರುತ್ತಾನೆ.

4. ದೊರೆತ ಮದ್ಯವನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಳ್ಳಲಾಯಿತು. ರಾಸಾಯನಿಕ ವಿಶ್ಲೇಷಣಾ ಪರೀಕ್ಷೆಗಾಗಿ ಎಲ್ಲಾ ಟೆಟ್ರಾ ಪ್ಯಾಕೆಟ್ ಗಳನ್ನು ಮಾದರಿ ಮದ್ಯವಾಗಿ ಪ್ರತ್ಯೇಕಿಸಿ ಬಟ್ಟೆಯ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಸೀಲ್ ಮಾಡಿ ಸಂಖ್ಯೆ 566 ರಂತೆ ಇಲಾಖಾ ಮೊಹರು ಮಾಡಲಾಯಿತು. ಸ್ಥಳದಲ್ಲಿ ಮಾದರಿ ಚೀಟಿಗಳನ್ನು ತಯಾರಿಸಿ ಅದಕ್ಕೆ ಅಂಟಿಸಿ ನಾನು, ಚಾ ಸಾ 1 ಹಾಗೂ ಸಾಕ್ಷಿದಾರರು ಸಹಿ ಮಾಡಿರುತ್ತೇವೆ. ಸ್ಥಳದಲ್ಲಿ ಪಂಚರ ಸಮಕ್ಷಮ ಬೆಳಗ್ಗೆ 11-15 ರಿಂದ 12-15 ರ ವರೆಗೆ ಪಂಚನಾಮೆ ಜರುಗಿಸಿ ವರದಿ ಸಿದ್ದಪಡಿಸಿ, ನಾನು ಹಾಗೂ ಪಂಚರು ಸಹಿ ಮಾಡಿರುತ್ತೇವೆ.

5. ಸದರಿ ಅಮಾನತುಪಡಿಸಿಕೊಂಡ ಮದ್ಯ ಹಾಗೂ ವರದಿಯೊಂದಿಗೆ ಕಛೇರಿಗೆ ಬಂದು ಚಾ ಸಾ 1 ರವರು ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ನಂತರ ನಾನು ದಿನಾಂಕ 27-05-2024 ರಂದು ರಾಸಾಯನಿಕ ಪರೀಕ್ಷೆಗಾಗಿ ಮುದ್ದೆ ಮಾಲುಗಳನ್ನು ಎಫ್ ಎಸ್. ಎಲ್ ಧಾರವಾಡಕ್ಕೆ ತೆಗೆದುಕೊಂಡು ಹೋಗಿ, ದಿನಾಂಕ 06-06-2024 ರಂದು ವರದಿಯನ್ನು ತಂದು ದಿನಾಂಕ 07-06-2024 ರಂದು ಚಾ ಸಾ 5 ರವರಿಗೆ ನೀಡಿ, ಆ ಕುರಿತು ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

6. ಸಾಕ್ಷಿದಾರರು ನಿಪಿ 3 ರ ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3ಬಿ ಎಂದು ಗುರುತಿಸಲಾಯಿತು. ಸಾಕ್ಷಿದಾರರು ಮುದ್ದೆ ಮಾಲುಗಳು ಮತ್ತು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ಗುನ್ನಾ ಜಾಗಕ್ಕೆ ಗಂಗಾಜಲ ತಾಂಡಾದ ಮೂಲಕ ತಲುಪಿರುತ್ತೇವೆ. ಸದರಿ ಸ್ಥಳದಿಂದ ಗುನ್ನಾ ಜಾಗಕ್ಕೆ ಅಂದಾಜು 12 ಕಿ.ಮೀ. ಅಂತರ ಇರುತ್ತದೆ. ಆರೋಪಿಯನ್ನು ಮೊದಲು ಚಾ ಸಾ 1 ರವರು ನೋಡಿರುತ್ತಾರೆ. ಆರೋಪಿಯು ಒಂದು ಬಿಳಿ ಚೀಲದಲ್ಲಿ ಟೆಟ್ರಾ ಪ್ಯಾಕೆಟ್ ಗಳನ್ನು ತರುತ್ತಿದ್ದನು. ಸಾಕ್ಷಿಗೆ ಗುನ್ನಾ ಜಾಗದ ಚಕ್ಕುಬಂದಿಯನ್ನು ಕೇಳಿದ್ದು ನಿಪಿ 3 ರಲ್ಲಿ ತೋರಿಸಿರುವ ಚಕ್ಕುಬಂದಿಯನ್ನು ನುಡಿದಿರುತ್ತಾರೆ. ನಾವು ಗುನ್ನಾ ಜಾಗಕ್ಕೆ ಬೇಟಿ ನೀಡಿಲ್ಲ, ಪಂಚನಾಮೆ

ತಯಾರಿಸಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳನ್ನು ಎಫ್ ಎಸ್. ಎಲ್ ವರದಿಗೆ ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಚಾ ಸಾ 1 ರವರು ಮೇಲಧಿಕಾರಿಯಾದ ಕಾರಣ ಅವರು ಹೇಳಿದಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ಹಾ ಜಾಗಕ್ಕೆ ಬೇಟಿ ನೀಡದೇ ಇದ್ದರೂ ಸಹ ಪಂಚನಾಮೆಯನ್ನು ಕಚೇರಿಯಲ್ಲಿ ಕುಳಿತು ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ, ಮು.ಮಾ.ಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ
ರಾಣೇಬೆನ್ನೂರು.
ಸಿ.ಸಿ.ಸಂಖ್ಯೆ: 706/2024

ಪಿ ಡಬ್ಲ್ಯೂ: 3
ಸಿ ಡಬ್ಲ್ಯೂ: 3

| | | |
|---|---|---|
| ಸಾಕ್ಷಿಯ ಹೆಸರು | : | ದೇವರಾಜ |
| ತಂದೆಯ ಹೆಸರು | : | ಹನುಮಂತಪ್ಪ |
| ವಯಸ್ಸು | : | 32 |
| ಉದ್ಯೋಗ | : | ಪೇಂಟರ್ |
| ವಾಸಸ್ಥಳ | : | ರಾಣೇಬೆನ್ನೂರು |

ದಿನಾಂಕ: 02-12-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಸಾಕ್ಷಿದಾರರಿಗೆ ನಿಪಿ 2 ರ ಗುನ್ನಾ ಜಾಗದ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು **ನಿಪಿ 2 ಸಿ** ಎಂದು ಗುರುತಿಸಲಾಯಿತು. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಸದರಿ ಸಹಿಯನ್ನು ನಾನು ಈಗ್ಗೆ 2 ವರ್ಷಗಳ ಹಿಂದೆ ಅಬಕಾರಿ ಕಚೇರಿಯಲ್ಲಿ ಮಾಡಿರುತ್ತೇನೆ. ನಿಪಿ 2 ರಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

**ಮಾನ್ಯ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು**

**ಪಾಟೀ ಸವಾಲು: ಮಾನ್ಯ ಸ.ಸ.ಅ. ರವರಿಂದ:**

ದಿನಾಂಕ 01-05-2024 ರಂದು ಸಂಜೆ 05-30 ರಿಂದ 06-30 ರ ವರೆಗೆ ನನ್ನ ಹಾಗೂ ಚಾ ಸಾ 2 ರವರ ಸಮಕ್ಷಮ ಗುನ್ನಾ ಜಾಗದಲ್ಲಿ ನಿಪಿ 2 ರಂತೆ ಆರೋಪಿಯಿಂದ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡು ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ರಾಸಾಯನಿಕ ಪರೀಕ್ಷೆಗಾಗಿ ಸದರಿ ಮುದ್ದೆ ಮಾಲುಗಳನ್ನು ಪ್ರತ್ಯೇಕಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಊರಿನವರಾದ ಕಾರಣ

ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲು ಇಲ್ಲ.**

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.